# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್–2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ–ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/341/ಗ್ರಾಪಂಕಾ/2015 ದಿನಾಂಕ:14.09.2015.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-2/DE/460/2015/ARE-10 Dt:18.03.2017.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/460/2015/ARE-10 Dt:18.04.2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/339/ಗ್ರಾಪಂಕಾ/2017 ದಿನಾಂಕ:05.05.2017.
5. ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್–2 ಕಾರ್ಯದರ್ಶಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:03.06.2017.
6. ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:10.06.2017.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್–2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ನಿಬಂಧಕರು ವಿಚಾರಣೆಗಳು–10, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ"**

The charges leveled against DGOs 1 & 2 were that, while they were working as Secretary Grade-2, and Panchayayath Development Officer, Harekala Gram Panchayath, Mangaluru Taluk, Dakashina kannada District respectively, an estimation was prepared to execute the work of construction of storm water drain to the true of Rs. 80,000/- for the year 2011-12 However, payment of Rs.62,614/- was made even without mentioning the measurements in the Measurement Book (MB) and without even verifying the actual work. Further, DGOs 1 & 2 also made excess payment to the tune of Rs. 11,911/- Rs.36,196/- and Rs.33,464/- totaling to Rs.81,571/- in respect of three roads which were not executed. Thereby, DGOs 1 & 2

are responsible for the loss caused to the Tune of Rs. 1,44,185/- to the State Exchequer in respect of all the 4 works. As such, both DGOs 1 & 2 failed to maintain absolute integrity, devotion to duty and rendered themselves as unbecoming of Government Servant and committed misconduct within the meaning of Rule 3(1) of Karnataka Civil Service (Conduct) Rules 1966.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ವಿಚಾರಣಾಧಿಕಾರಿಯವರ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ಮಾಡದೇ ಹಣ ಪಾವತಿ ಮಾಡಿರುವ ಆರೋಪವು ಸಾಬೀತಾಗಿರುವುದರಿಂದ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಶಾಶ್ವತವಾಗಿ ತಡೆಯಿಡಿಯುವಂತೆ ಹಾಗೂ ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ರವರಿಗೆ ನಿವೃತ್ತಿ ಸೌಲಭ್ಯಗಳ 05% ಮೊತ್ತವನ್ನು 05 ವರ್ಷಗಳ ಅವಧಿಗೆ ತಡೆಯಿಡಿಯುವಂತೆ ದಂಡನೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ವಿಧಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಈ ಸಂಬಂಧ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ, ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಸದರಿ ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಕಾರ್ಯದರ್ಶಿ ಗ್ರೇಡ್-2 ಹರೇಕಾಳ ಗ್ರಾಮ ಪಂಚಾಯಿತಿರವರು ತಮ್ಮ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು ಪ್ರಸ್ತುತ ಮಿತ್ತಬಾಗಿಲು ಗ್ರಾಮ ಪಂಚಾಯಿತಿಯಲ್ಲಿ ಗ್ರೇಡ್-2 ಕಾರ್ಯದರ್ಶಿ, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಹರೇಕಾಳ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾಮಗಾರಿಗೆ ಸಂಬಂಧಿಸಿದ ಹಣದ ವ್ಯವಹಾರವನ್ನು ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರೇ ನಿರ್ವಹಿಸಿದ್ದು, ಸದರಿಯವರು ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲವೆಂದು ಅಳತೆ ಪುಸ್ತಕದ ನಿರ್ವಹಣೆಯಲ್ಲಿಯೂ ಕೂಡ ಇಂಜಿನಿಯರ್ ವಿಭಾಗದವರು ಬರೆದಿರುತ್ತಾರೆಂದು ಅದನ್ನು ಪರಿಶೀಲಿಸಿ ಹಣ ಪಾವತಿ ಮಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಟಿಪ್ಪಣಿಯಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮಂಜೂರು ಮಾಡಿ ಜಂಟಿ ಸಹಿಯೊಂದಿಗೆ ಹಣ ಪಾವತಿಸಿರುತ್ತಾರೆ ಆದುದರಿಂದ ಸದರಿ ಪ್ರಕರಣದಲ್ಲಿ ಇವರ ತಪ್ಪೇನಿರುವುದಿಲ್ಲವೆಂದು ಆ ಪ್ರಯುಕ್ತ ಸದರಿಯವರನ್ನು ನಿರಾಪರಾಧಿ ಎಂದು ದೋಷಮುಕ್ತಗೊಳಿಸಿ ಶಿಸ್ತು ಕ್ರಮದಿಂದ ಕೈಬಿಡಬೇಕೆಂದು ಕೇಳಿಕೊಂಡಿರುತ್ತಾರೆ.

ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ತಮ್ಮ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು ದಿನಾಂಕ:06.07.2011 ರಿಂದ 13.10.2011 ರವರೆಗೆ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಎರಡು ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುವಾಗ ಕಾರಣಾಂತರದಿಂದ ಲೋಪವಾಗಿರುತ್ತದೆಂದು, ಸದರಿಯವರು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟ ರೂ.144185/- ಗಳಾಗಿದ್ದು ಅದನ್ನು ಈ ಹಿಂದೆಯೇ ಪಂಚಾಯಿತಿ ಖಾತೆಗೆ ಜಮಾ ಮಾಡಿರುವುದಾಗಿ ಹಾಗೂ ದಿನಾಂಕ:31.05.2012 ರಂದು ಸೇವೆಯಿಂದ ನಿವೃತ್ತಿ ಹೊಂದಿ ಈಗಾಗಲೇ 5 ವರ್ಷ ಕಳೆದಿದ್ದು, ಅನಾರೋಗ್ಯ ಪೀಡಿತರಾಗಿದ್ದು, ಜೀವನಧಾರಕ್ಕೆ ದುಡಿಯುವ ಮಕ್ಕಳಿಲ್ಲದೇ ಬೇರೆ ಸಂಪನ್ಮೂಲಕ್ಕೆ ದಾರಿ ಇಲ್ಲದಿರುವುದರಿಂದ ಆರ್ಥಿಕವಾಗಿ ಸಮಸ್ಯೆ ಉಂಟಾಗಿರುವುದಾಗಿ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿದ ಪಿಂಚಣಿ ಕಡಿತ ಶಿಕ್ಷೆ ಪ್ರಮಾಣದಲ್ಲಿ ಮತ್ತು ಅಳತೆಯಲ್ಲಿ ಇಳಿಕೆ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

ಸದರಿ ಆಪಾದಿತರ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ, ಕಾರಣ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

In the Cross Examination made by DGO-1, PW2 has deposed that he has not personally visited the spot for the investigation. He admits that only on the basis of the documents furnished by Executive Officer, Mangalore Taluk, he has submitted his report. He denies that if he had personally visited the spot, the truth would have come out. He has not recorded the statements of DGOs 1 & 2. He does not know that earlier to his investigation, the other Assistant Executive Engineer, TA, Karnataka Lokayukta visited the spot and inspected the works.

Further PW2 admits that the Junior Engineer has to record the measurement, the Junior Engineer has to measure the work, Assistant Executive Engineer has to check measure the work, then only the bill will be passed in gramsabha and payment will be made. He dinies that all the works were done satisfactorily and then only payment was made.

In the Cross Examination made by DGO-2, PW2 has deposed that the concerned Junior Engineer or Assistant Engineer has to record the measurement of the work everyday. He admits that the DGOs 1 and 2 have no power to record the measurement book. He does not know whether from the house of Vaddadaguri Ismil's house to the house of Aithappa Shetty, actually the work done or not. He admits that the Junior Engineer is the responsible officer to record the work measurement and its cost. He has not visited the spot to verify the genuineness of the documents furnished by Executive Officer.

Further PW2 denies that thought the Assistant Engineer and Executive Engineer were the responsible Officers to record the measurement and its cost in order to safeguard their interest, he has falsely implicated DGOs in this case. He has not secured the Photographs of the spots from Executive Officer. He admits that only after the panchayath passed the resolution, the cheque will be issued. He has not secures the copy of the Panchayath resolution. He denied that even after knowing the true facts, he has filed a false report.

DGOs have taken the contention that regarding 1st work, Ombussman have already enquired the matter and ordered to recover the amount and accordingly they have not

furnished any such documents on record to show that they have remitted back the particular amount to the Government towards the loss caused to State Exchequer.

The evidence of PW2 and his report Exp7 clearly shows that in Harekala Village, from the house of Vaddadaguri Ismail to the house of Ithappa Shetty, the drainage and bund work was taken up during the year 2011-12 under MGNREGA scheme at the cost of Rs.80,000/- but the work was not done. Measurement book was not recorded payment of Rs.62,614/- was made. In the work from Higher Primary school to Rajagudde, excess payment of Rs.48,749/- is made, in the work from Aladdka house to the house of Ganadagatte Hasanabba, the excess payment of Rs. 36,196/- was made, in the work from the house of Mallarkodi Mundappa to the house of victor excess payment of Rs. 33,460/- is made. Therefore the total loss caused to State Exchequer is Rs. 2,25,758/-. This clearly shows that IO has not included the amount already remitted back by the DGOs. Now the total excess payment is Rs. 1,44,185/-. Thereby, the DGOs being the Government servants, failed to maintain absolute integrity besides devotion to duty and acted in a manner unbecoming of the Government servants.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

Having regard to the findings of the Inquiry Officer and also having regard to the gravity of the misconduct alleged against the DGOs it is hereby recommended to the Government that, the DGO Shri Maruthi Hanumanthappa Bandivaddar, Secretary, Grade-2, Harekala Gram Panchayath, Managaluru Taluk, Dakshina kannada District, be punished with the penalty of **"withholding of two annual increments for a perpetually"** in exercise of powers under Rule 8(iii) of the Karnataka Civil Service (Classification and Appeal ) Rules, 1957 and the DGO Shri Chndrahas, Panchayath Develpoment Officer, Harekala Gram Panchayath, Managaluru Taluk, Dakshina kannada District, who is stated to have retired, be punished with the penalty of **"denial of 05% of pensionary benefit for a period of five years"** in exercise of powers under Rule 214(1)(a) of Karnataka Civil Service Rules.

ಸರ್ಕಾರವು ಸದರಿ ಪ್ರಕರಣದಲ್ಲಿ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಮತ್ತು ಶ್ರೀ ಚಂದ್ರಹಾಸ್, ಇವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಶಿಫಾರಸ್ಸು ಹಾಗೂ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ, ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಶಾಶ್ವತವಾಗಿ ತಡೆಯಿಡಿಯುವಂತೆ ಹಾಗೂ ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ರವರಿಗೆ ಸದರಿಯವರ ನಿವೃತ್ತಿ ಸೌಲಭ್ಯಗಳ 05% ಮೊತ್ತವನ್ನು 05 ವರ್ಷಗಳ ಅವಧಿಗೆ ತಡೆಯಿಡಿಯುವ ದಂಡನೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:339:ಗ್ರಾಪಂಕಾ2017 ಬೆಂಗಳೂರು, ದಿನಾಂಕ-17-10-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮತ್ತು ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ಮಾಡದೇ ಹಣ ಪಾವತಿ ಮಾಡಿರುವ ಆರೋಪವು ಸಾಬೀತಾಗಿರುವುದರಿಂದ ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಶಾಶ್ವತವಾಗಿ ತಡೆಯಿಡಿಯುವಂತೆ ಹಾಗೂ ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ರವರಿಗೆ ಸದರಿಯವರ ನಿವೃತ್ತಿ ಸೌಲಭ್ಯಗಳ 05% ಮೊತ್ತವನ್ನು 05 ವರ್ಷಗಳ ಅವಧಿಗೆ ತಡೆಯಿಡಿಯುವಂತೆ ದಂಡನೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
6. ಶ್ರೀ ಮಾರುತಿ ಹನುಮಂತಪ್ಪ ಬಂಡಿವಡ್ಡರ್, ಗ್ರೇಡ್-2 ಕಾರ್ಯದರ್ಶಿ, ಹರೇಕಾಳ ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
7. ಶ್ರೀ ಚಂದ್ರಹಾಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹರೇಕಾಳ ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.